ಏನೂ ಇಲ್ಲ. ಅಷ್ಟಕ್ಕೂ ನಾನೇನು ಕೂಸೇನು? ಯಾವುದು ಒಳ್ಳೇದು? ಯಾವುದು ಕೆಟ್ಟದ್ದು ಅಂತ ನನಗ ಗೊತ್ತಾಗುದಿಲ್ಲೇನು?' ಇದೇ ವಿಷಯದ ಮಾತುಕತೆಯಲ್ಲಿ ಹಿಂದೊಮ್ಮೆ ರೂಪಾ ನನಗೆ ಪ್ರಶ್ನೆಯ ಮೇಲೆ ಪ್ರಶ್ನೆ ಹಾಕಿದ್ದಳು. ಅಷ್ಟು ಓದಿದವಳು, ರ‍್ಯಾಂಕ್ ಬಂದವಳು, ರಾಜಕೀಯದ ಸೂಕ್ಷ್ಮಗಳನ್ನು ಬಲ್ಲವಳು ನನ್ನನ್ನು ಪ್ರಶ್ನಿಸುತ್ತಿರಬೇಕಾದರೆ ನಾನು ಹೇಳುವುದಾದರೂ ಏನಿತ್ತು? 'ನೋಡವಾ ರೂಪಾ, ನಿಮ್ಮ ಅಪ್ಪ ನಿನಗ ಕೆಟ್ಟ ಹೇಳ್ತಾ ಇಲ್ಲ. ನಿನಗ ಒಳ್ಳೇದಾಗ್ಲಿ ಅಂತ ಅವರ ವಿಚಾರ. ನನಗೂ ಇದರಾಗ ಅಷ್ಟು ಗೊತ್ತಾಗೂದಿಲ್ಲ. ಇನ್ನೊಂದ್ಸಲ ಸಾರಾಸಾರ ನೀನೇ ವಿಚಾರ ಮಾಡು.' ನನ್ನ ಮಾತು ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಹಾಗೆ ಎಂದು ನನಗೆ ಗೊತ್ತಿತ್ತು. ತುಂಬು ಸೆಳವಿನ ಅದರ ಓಟದಲ್ಲಿ ಎಷ್ಟೊತ್ತು ಅದು ನನ್ನ ವಿಚಾರಧಾರೆಯನ್ನು ಹಿಡಿದಿಟ್ಟುಕೊಂಡೀತು? ಆದರೂ ಬಸವರಾಜ ತನ್ನ ಪ್ರಯತ್ನ ಬಿಟ್ಟಿರಲಿಲ್ಲ. 'ಆಕಿ ಮ್ಯಾಲಿನ ಬಾಸ್‌ಗಳು ಈಕಿ ವಿಚಾರಧಾರೆ ಹೆಂಗ ಪ್ರಸಾರ ಮಾಡಲಿಕ್ಕೆ ಬಿಡತಾರ? ಒಂದೆರಡು ಕಹಿ ಘಟನೆ ಆಗ್ಯಾವು ಅನಿಸ್ತದ. ನನ್ನ ಮುಂದ ಹೇಳತಿದ್ಲು. ಅದಕ್ಕ ಇನ್ನೊಂದು ಸಲ ಆಕೀನ ಮುಂದ ಕುಂದ್ರಸಕೊಂಡು ಅವಳಿಗೆ ತಿಳಿಹೇಳೋಣು.' ಬಸವರಾಜ ಹೇಳಿದ್ದ. ಆಯ್ತು ಅಂದಿದ್ದೆ. ಆದರೆ ಅವನ ಅಭಿಲಾಷೆ ಅಭಿಲಾಷೆಯಾಗಿಯೇ ಉಳಿಯಿತು. 'ಈ ಕೊರೊನಾ ಮುಗೀಲಿ ತಗೋ. ಆಕೀನೂ ಸ್ವಲ್ಪ ಪೆಟ್ಟು ತಿನ್ನಲಿ. ಒಂದು ವಾರ ಆಕಿ ರಜಾ ಹಾಕಿ ಬಂದಾಗ ಆರಾಮದಿಂದ ಹೇಳೋಣಂತ. ಆವಾಗ ಚರ್ಚೆ ಮಾಡೋಣ.' ನಾ ಹೇಳಿದ್ದೆ.

ಕೊರೊನಾ ತನ್ನ ಗತಿಯನ್ನು ಬದಲಾಯಿಸುವ ಮುನ್ನವೆ ಬಸವರಾಜನ ಬದುಕಿನ ಗತಿ ಒಂದು ಕೊನೆ ಕಂಡುಕೊಂಡಿತು. ಈ ಸಾಂಕ್ರಾಮಿಕ ರೋಗ ಬಂದಾಗಿನಿಂದ ಬಸವರಾಜನ ಮನೆಗೆ ಹೋಗುವುದೇ ಆಗಿರಲಿಲ್ಲ. ಈಗ ಹೋಗಿಹೋಗಿ ಅವನ ಶವಸಂಸ್ಕಾರಕ್ಕೆ ಹೋಗುವುದಾಯಿತಲ್ಲ ಎಂದು ಆಲೋಚಿಸುತ್ತ ನನ್ನ ಎದೆ ತುಂಬಿ ಬಂದಿತು. ಮನಸ್ಸಿನಲ್ಲಿ ಒಂದು ರೀತಿಯಲ್ಲಿ ಕಳವಳ ತುಂಬಿಕೊಂಡಿತು. ಅವನ ಮನೆಗೆ ಹೋಗುವುದು ದೂರವೇ ಉಳಿಯಿತು, ಈ ನಾಲ್ಕಾರು ತಿಂಗಳು ಫೋನಿನಲ್ಲಿ ಕೂಡ ನಾವು ಹೆಚ್ಚು ಮಾತಾಡಿರಲಿಲ್ಲ. ಅದು ಒಂದು ರೀತಿಯಲ್ಲಿ ನನಗೂ ಆಶ್ಚರ್ಯವಾಗಿತ್ತು. ಯಾಕೆಂದರೆ ಅನೇಕ ವರ್ಷಗಳಿಂದ ದಿನವೊಂದಕ್ಕೆ ಕನಿಷ್ಠ ಎರಡು ಮೂರು ತಾಸಿನಷ್ಟಾದರೂ ಅವನ ಜೊತೆ ಇಲ್ಲವೆ ಇನ್ಯಾರೋ ಗೆಳೆಯರ ಜೊತೆ ಮಾತಾಡುತ್ತ ಹೋಗಿರುತ್ತಿತ್ತು. 'ಮೊನ್ನಿ ಕಿವಿನೋವು ಅಂತ ಒದ್ದಾಡಿತಿದ್ದರಲ್ಲ. ಕಿವಿ ಸೋರಲಿಕ್ಕೆ ಹತ್ತೆತೇನೋ ಅಂತ ಗಾಬರಿ ಬಿದ್ದಿದ್ದಲ್ಲ. ಹಗಲ ಹನ್ನೆರಡ ತಾಸು, ಮತ್ತ ರಾತ್ರಿ ಆರು ತಾಸು ಮೊಬೈಲ್ ಕಿವಿಯೊಳಗ ಇಟ್ಕೊಂಡು ಕುಂತ್ರ ಸೋರದೇ ಏನ್ ಮಾಡೀತು? ಕಿವಿನೂ ಸೋರತಾವ, ಕಣ್ಣೂ ಸೋರತಾವ. ಇವರ‍್ರಿಗೆ ಗೆಳ್ಯಾರು ಸಿಕ್ರ ಸಾಕು, ಹಬ್ಬದೂಟ ಇದ್ದಂಗ.' ಹೆಂಡತಿ ಉಮಾ ಅಂದೇ ಅನ್ನುತ್ತಿದ್ದಳು. ಇಷ್ಟು ವರ್ಷಗಳಲ್ಲಿ ನಾನು ಗೆಳೆಯರ ಮನೆಗಾದರೂ ಹೋಗುವುದು, ಇಲ್ಲವೆ ಅವರಾದರೂ ನಮ್ಮ ಮನೆಗೆ ಬರುವುದು ಇದ್ದೇ ಇರುತ್ತಿತ್ತು. ಹೆಂಡತಿಯನ್ನು ಮರೆತರೂ ಮರೆತಾರು, ಆದರೆ ಇವರದು ಗೆಳೆಯರನ್ನು ಮರೆಯುವ ಸ್ವಭಾವವಲ್ಲ ಎಂದು ಆಕೆ ಮಕ್ಕಳಲ್ಲಿ ದೂರುವುದು ಸಾಮಾನ್ಯವಾಗಿತ್ತು.

ಬಸವರಾಜನ ಮನೆಯವರನ್ನು ಹೇಗೆ ಸಮಾಧಾನ ಮಾಡಬೇಕೆಂದು ತಿಳಿಯದೆ ನಾನು ತಲೆತಗ್ಗಿಸಿ ಕುಳಿತಿದ್ದೆ. ಎಷ್ಟು ಬೇಗ ಎಲ್ಲ ಮುಗಿದುಹೋಯಿತು! ಅವನನ್ನು ಮಣ್ಣಕುಣಿಯಲ್ಲಿರಿಸಿ ಮಣ್ಣು ಮಾಡಿಬಂದೆವು. ತಾಸೆರಡು ತಾಸಿನ ಹಿಂದೆ ಮಾತಾಡುತ್ತಿದ್ದವನು, ಎದೆನೋವು ಎಂದು ಮುದ್ದೆಯಾಗಿ ಕುಳಿತವನು ಈ ಕ್ಷಣ ನಮ್ಮೊಂದಿಗೆ ಇಲ್ಲವೆನ್ನುವ ಅನುಭವ ನಮ್ಮೊಳಗೆ ಶೂನ್ಯವನ್ನು ಸೃಷ್ಟಿಸುತ್ತಿತ್ತು. ಬಸವರಾಜನ ಹೆಂಡತಿ ಮತ್ತು ಮಗಳು ರೂಪಾ ತುಂಬ ಅಧೈರ್ಯದಿಂದ ಬಸವಳಿದಿದ್ದರು. ಇಷ್ಟು ಅಧೈರ್ಯದಿಂದ ಅವರನ್ನು ನಾನು ಎಂದೂ ನೋಡಿದವನಲ್ಲ. ರೂಪಾಳಂತೂ ಎಂತಹ ವಿಷಮ ಪರಿಸ್ಥಿತಿಯಲ್ಲಿಯೂ ಸಮಾಧಾನಚಿತ್ತದಿಂದ ಇರುವವಳು. ಆಕೆ ನಡೆಸುತ್ತಿದ್ದ ಟಿ.ವಿ. ಸಂದರ್ಶನಗಳಲ್ಲಿ ಅದು ಎಷ್ಟೋ ಸಾರಿ ಗೊತ್ತಾಗುತ್ತಿತ್ತು. ಆಕೆ ಯೂನಿವರ್ಸಿಟಿಯಲ್ಲಿ ಎಂ.ಎ. ಪತ್ರಿಕೋದ್ಯಮದಲ್ಲಿ ಚಿನ್ನದ ಪದಕ ಗೆದ್ದವಳು. 'ನಮ್ಮ ರೂಪಾ ಅಂಥಾಇಂಥಾ ಗೋಲ್ಡ್ ಅಲ್ಲ, ಇಪ್ಪತ್ತಾಲ್ಕು ಕ್ಯಾರೆಟ್ ಗೋಲ್ಡ್.' ಬಸವರಾಜ ಅವಳನ್ನು ಎಷ್ಟು ಸಾರಿ ಹೊಗಳಿಲ್ಲ? ರೂಪಾಳ ಜಾಣ್ಮೆ ನಮ್ಮೆಲ್ಲರಿಗೂ ಗೊತ್ತಿದ್ದದ್ದೆ. ಆಕೆಗಿರುವ ಧೈರ್ಯ ನನಗಿಲ್ಲ ಎಂದೇ ಅಪ್ಪ ಹೇಳುತ್ತಿದ್ದ. ಬೆಂಗಳೂರಿಗೆ ಒಬ್ಬಳೇ ಅಡ್ಡಾಡುತ್ತಿದ್ದಳು. 'ಆಕಿಗಿ ಟ್ರೇನು, ವಿಮಾನ ಅಂದ್ರ ಸಿಟಿಬಸ್ ಆದಂಗ ಆಗ್ಯಾವು ನೋಡು'. ಅಪ್ಪನ ಮಾತಿನಲ್ಲಿ ಮಗಳ ಮೇಲಿನ ಮೋಹ ಬೆಳೆಯುತ್ತಲೆ ಇರುತ್ತಿತ್ತು.

ಈ ಕೊರೊನಾ ರೋಗದ ಬಗ್ಗೆ ಬಸವರಾಜ ತುಂಬ ಹೆದರಿಕೊಂಡಿದ್ದಾಗ ಮಗಳೆ ಅವನಿಗೆ ಧೈರ್ಯ ಹೇಳಿದ್ದಳು. ಅದನ್ನು ಆಗಾಗ ನಮ್ಮ ಮುಂದೆ ಹೇಳುತ್ತಲೂ ಇದ್ದ: 'ರೂಪಾ ಹೇಳಿದ್ದು ಸರಿ ಐತಿ ನೋಡು, ಶೇಕಣ್ಣ. ಇದಕ್ಕ ಅಷ್ಟೇನು ಹೆದರಬೇಕಾಗಿಲ್ಲ. ಆದರ ಎಚ್ಚರ ಇರಬೇಕು. ನಾವು ಸ್ವಲ್ಪ ಅಂಜಿಕಿ ಬಿಟ್ಟು ಮಾತಾಡಬೇಕು. ನಮ್ಮ ರೂಪಾ ಹೆಂಗ ಟೀವಿಯೊಳಗ ರಾಜಕೀಯ ಚರ್ಚೆ ನಡೆಸಿಕೊಡ್ತಾಳು ಅಂತ ನೀವು ಬೆರಗಾಗಿ ನೋಡ್ತೀರಿ. ಆಕೀ ಮಾಡೋ ರಾಜಕೀಯ ಮಾತುಕತೆಯಂತೂ ಬಾಳ ಮಂದಿ ಮೆಚ್ಚಕೊಂತಾರ. ಶೇಕಣ್ಣ, ನೀ ನೋಡೋದಿಲ್ಲೇನು?' ಮೊದಮೊದಲು ಈ ರಾಜಕೀಯ ಚರ್ಚೆಗಳನ್ನು ನಾವು ಎಷ್ಟೆಲ್ಲ ನೋಡುತ್ತಿದ್ದೆವು. ಅವುಗಳೇ ನಮ್ಮ ಮಾತುಕತೆಯನ್ನು ನಿರ್ದೇಶಿಸುತ್ತಿದ್ದವು. ಆದರೆ ಇತ್ತೀಚೆಗೆ ಅವುಗಳ ಬಗ್ಗೆ ಯಾಕೋ ನಿರಾಸಕ್ತಿ ಮೂಡತೊಡಗಿತ್ತು. ರೂಪಾ ಅರಳು ಹುರಿದಂತೆ ಮಾತಾಡಬಲ್ಲವಳು ಎಂಬುದು ಟಿ.ವಿ. ನೋಡುವ ಯಾರಿಗಾದರೂ ಗೊತ್ತಾಗುತ್ತಿತ್ತು. ಅವಳ ಪ್ರಶ್ನೆಗೆ ಅನೇಕರು ಮಂಕಾಗಿ ಕೂರುತ್ತಿದ್ದರು. ಮಗಳ ಬಗ್ಗೆ ಅಪ್ಪ ಹೇಳತೊಡಗಿದರೆ ಅದು ಸ್ವಲ್ಪದರಲ್ಲಿ ಮುಗಿಯುತ್ತಿರಲಿಲ್ಲ. ನಾವೇ ಯಾರೋ ಅವನ ಪ್ರಶಂಸೆಯನ್ನು ತುಂಡರಿಸುತ್ತಿದ್ದೆವು. 'ಏಯ್ ಬಿಡೋ ಬಸಣ್ಣ, ಹೆತ್ತವರಿಗೆ ಹೆಗ್ಗಣ ಮುದ್ದು. ಅಲ್ಲೇನ್ರೋ?' ಜೊತೆ ಕುಳಿತ ಗೆಳೆಯನೊಬ್ಬ ಬಸಣ್ಣನ ಕಾಲೆಳೆಯುತ್ತಿದ್ದ. ಆದರೆ ಅಂದು ಆತ ಕಣ್ಣಲ್ಲಿ ನೀರು ತಂದು 'ಆಕೀ ನನ್ನ ಮಗಳು ಅಂತ ಕೊಚ್ಚಿಕೊಂಡು ಹೇಳ್ತಾ ಇಲ್ಲ. ಖರೇ ಆಕೀ ಒಂದೊಂದು ಸಲ ಚರ್ಚೆಯೊಳಗ ನನ್ನೇ ಮಣಿಸಿಬಿಡ್ತಾಳು, ಗೊತ್ತೇನು? ಅಂತೂ ನನ್ನ ಹೆಸರ ಉಳಿಸಿಲಿಕ್ಕೆ ಹುಟ್ಟಿಬಂದಾಳು ಅನಿಸ್ತದ.' ಬಸವರಾಜ ರಾಜ್ಯಶಾಸ್ತ್ರದ ಅಧ್ಯಾಪಕನಾಗಿ ಹೋದವರ್ಷವಷ್ಟೇ ನಿವೃತ್ತನಾಗಿದ್ದ. ಅವನು ರಾಜಕೀಯ ಚರಿತ್ರೆ ಮತ್ತು ರಾಜಕೀಯ ಸಂಗತಿಗಳನ್ನು ವಿಶ್ಲೇಷಿಸುವ ಪರಿಗೆ ಯಾರಾದರೂ ಬೆರಗಾಗಬೇಕಿತ್ತು. ಬಸವರಾಜನ ವೈರಿಗಳು ಕೂಡ ಅವನ ರಾಜಕೀಯ ಐಡಿಯಾಲಜಿಯನ್ನು ಒಪ್ಪಿಕೊಂಡು ಅವನು ಹೇಳುವ ಪಕ್ಷದೊಳಗೆ ಸೇರ್ಪಡೆಯಾಗುವ ಸಂಭವವಿರುತ್ತಿತ್ತು. ಬಸವರಾಜ ಬರೆದಿರುವ 'ಭಾರತದ ರಾಜಕೀಯ ಚರಿತ್ರೆ' ಪುಸ್ತಕ ಹತ್ತಾರು ಬಾರಿ ಮುದ್ರಣಗೊಂಡಿದೆ. ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಆ ಪುಸ್ತಕ ಓದಿಯೇ ಪರೀಕ್ಷೆಯನ್ನು ಪಾಸಾಗುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಅದು ತುಂಬ ನೆರವಾಗುತ್ತದೆಯೆಂದು ಎಲ್ಲ ಪುಸ್ತಕದ ಅಂಗಡಿಗಳಲ್ಲಿ ಅದನ್ನು ಕಣ್ಣಿಗೆ ಕಾಣುವ ಹಾಗೆ ಇಟ್ಟಿರುತ್ತಾರೆ. ಆತ ರವಿವಾರಕ್ಕೊಮ್ಮೆ ಬರೆಯುವ 'ರಾಜಕೀಯ ಒಳಸುಳಿಗಳು' ಅಂಕಣ ಬಹಳಷ್ಟು ಜನಪ್ರಿಯವೆಂದು ಅನಿಸುತ್ತದೆ.

ಅವನು ಆಲಸಿಯಾಗಿರದಿದ್ದರೆ ಒಂದು ರಾಜಕೀಯ ಪಕ್ಷ ಸೇರಿ ಅದರ ಒಬ್ಬ ವಕ್ತಾರನಾಗಬಹುದಿತ್ತು. ಆದರೆ ಬಸವರಾಜ ಹೇಳುತ್ತಿದ್ದುದೆ ಬೇರೆಯಿತ್ತು. 'ನನಗಿದೆಲ್ಲ ಬ್ಯಾಡ. ಯಾವುದು ಒಳ್ಳೇದು, ಯಾವುದು ಕೆಟ್ಟದ್ದು ಅಂತ ಹೇಳೋ ಒಬ್ಬ ಮಾಸ್ತರ್ ನಾನು.' ತನ್ನನ್ನು ಕೇವಲ ಮಾಸ್ತರ್ ಮಾತ್ರ ಎಂದು ಕರೆದುಕೊಳ್ಳಲು ಆತ ಇಷ್ಟಪಡುತ್ತಿದ್ದ. ಯಾರೇ ತಪ್ಪು ಮಾಡಿದರೂ ಅದನ್ನು ಹೇಳುವಂತಹ ಛಾತಿಯನ್ನು ನಾವು ಬೆಳೆಸಿಕೊಂಡಿರಬೇಕು ಎನ್ನುವುದು ಅವನ ವಾದವಾಗಿರುತ್ತಿತ್ತು. ಬಸವರಾಜನ ಅಂಕಣ ಜನಪ್ರಿಯವಾಗುವ ಹೊತ್ತಿನಲ್ಲಿಯೇ ಈ ಕೊರೊನಾ ಪಸರಿಸತೊಡಗಿದ್ದು ಒಂದು ದುರದೃಷ್ಟವೇ ಎನ್ನಬೇಕು. ಎಷ್ಟೋ ದಿನ ಆತ ಬರೆಯುತ್ತಿದ್ದ ರವಿವಾರದ ಪುಟ ಪ್ರಕಟವಾಗಲಿಲ್ಲ. ಪ್ರಕಟವಾದರೂ ಪತ್ರಿಕೆಗಳಿಂದ ಕೊರೊನಾ ಹರಡುತ್ತದೆಯೆಂಬ ಭೀತಿಯಿಂದ ಜನರು ಪತ್ರಿಕೆಗಳನ್ನೆ ಕೊಂಡುಕೊಳ್ಳಲಿಲ್ಲ. ಕೊಂಡುಕೊಂಡರೂ ಅವುಗಳನ್ನು ಓದಲಿಲ್ಲ. ಪತ್ರಿಕೆಗಳು ಬಾಗಿಲ ಮುಂಬಾಗಿಲದ ಹತ್ತಿರವೇ ಬಿದ್ದಿರುತ್ತಿದ್ದವು. ಎರಡು ಮೂರು ದಿನ ಆದ ಮೇಲೆ ಮುಖಪುಟದ ಮೇಲೆ ಕಣ್ಣಾಡಿಸಿ ಅವುಗಳನ್ನು ಕಸದಬುಟ್ಟಿಗೆ ಒಗೆಯುತ್ತಿದ್ದರು! ಹೀಗಾಗಿ ಎಷ್ಟೋ